

# ರಜನಿಗಾಗಿ ಬರೆದ ಕಥೆಯೊಳಗೆ ಸೂರ್ಯ ಪ್ರವೇಶ

ನಟ ಸೂರ್ಯ ಕಣ್ಣಿನಲ್ಲಿ ಕುತೂಹಲ ಮಡುಗಟ್ಟಿದೆ. 'ರೆಟ್ರೊ' ತಮಿಳು ಸಿನಿಮಾ ಮೇ 1ರಂದು ಬಿಡುಗಡೆಯಾಗಲಿದೆ ಎಂದು ನಿಗದಿಯಾದಾಗಿನಿಂದ ಅವರು ಚಿತ್ರದ ಪ್ರಚಾರಕ್ಕೆ ಏನು ಬೇಕೋ ಎಲ್ಲವನ್ನೂ ಮಾಡುತ್ತಿದ್ದಾರೆ.

ಕಾರ್ತಿಕ್ ಸುಬ್ಬರಾಜ್ ನಿರ್ದೇಶನದ ಚಿತ್ರವಿದು. ಹಿಂಸಾಕಥನಗಳನ್ನು ಸ್ಟೈಲಿಶ್ ಆಗಿ ತೋರಿಸುವ ಮೂಲಕವೇ ಛಾಪು ಮೂಡಿಸಿದವರು ಕಾರ್ತಿಕ್. ರಜನೀಕಾಂತ್ ಹಾಗೂ ನವಾಜುದ್ದೀನ್ ಸಿದ್ಧಿಕಿ ಇಬ್ಬರನ್ನೂ ಮುಖಾಮುಖಿಯಾಗಿಸುವಂಥ ಯೋಚನೆಯನ್ನು ಈ ಹಿಂದೆ ಮಾಡಿ ಗೆದ್ದವರು. 'ಪೆಟ್ಟಾ' ಸಿನಿಮಾದಲ್ಲಿ ಅವರು ರಜನೀಕಾಂತ್ ಅವರನ್ನು ತೆರೆ ಮೇಲೆ ತೋರಿಸಿದ್ದ ಬಗೆ ಭಿನ್ನವಾಗಿತ್ತು. ಆದರೆ, ಸಿನಿಮಾ ನಿರೀಕ್ಷಿತ ಯಶಸ್ಸನ್ನು ಕಂಡಿರಲಿಲ್ಲ.

ಈ ಗುಂಗಿನಲ್ಲಿ ಇದ್ದಾಗಲೇ ಕಾರ್ತಿಕ್ ಬರೆದಿದ್ದ ಕಥೆ 'ರೆಟ್ರೊ'. ಅದನ್ನು ತಲಪತಿ ವಿಜಯ್ ಅವರನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಬರೆಯಲಾಗಿತ್ತು ಎಂದು ಈ ಹಿಂದೆ ವದಂತಿ ಹರಡಿತ್ತು. ಅದಕ್ಕೆ ಸ್ಪಷ್ಟನೆ ನೀಡಿರುವ ಕಾರ್ತಿಕ್, ಈ ಚಿತ್ರಕತೆಯನ್ನು ಬರೆದದ್ದು ರಜನೀಕಾಂತ್ ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಎಂದು ಹೇಳಿದ್ದಾರೆ.

ನಟ ಸೂರ್ಯ ಅವರಿಗೆ ಸ್ಕ್ರಿಪ್ಟ್ ನಿರೂಪಣೆ ಮಾಡುತ್ತಾ ಕುಳಿತಾಗ, ಅದರಲ್ಲಿ ರಜನೀಕಾಂತ್ ಅವರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಿದ್ದ ಅಂಶಗಳು ಗೊತ್ತಾದವು. ಅದನ್ನು ಸೂರ್ಯ ಕೂಡ ಗುರುತಿಸಿದರು. ಅಗತ್ಯ ಬದಲಾವಣೆ ಆಗಬೇಕೆಂದು ಚರ್ಚೆ ನಡೆದಿದ್ದು ಆಗಲೇ. ಆ ಸ್ಕ್ರಿಪ್ಟ್‌ಗೆ ಒಂದು ಪ್ರೇಮಕಥನದ ಎಳೆಯನ್ನು ಸೇರಿಸಲಾಯಿತು. ನಾಯಕನು ಕಳೆದುಕೊಂಡ ಪ್ರೀತಿಗಾಗಿ ನಡೆಸುವ ಹುಡುಕಾಟದ ಪಯಣವನ್ನೇ ವಸ್ತುವಾಗಿ ಬದಲಿಸಲಾಯಿತು. ಮೂಲ ಸ್ಕ್ರಿಪ್ಟ್‌ನ ಆತ್ಮ ಇಟ್ಟುಕೊಂಡೂ ಕಾರ್ತಿಕ್ ಅದನ್ನು ಬೇರೆ ಮಟ್ಟಕ್ಕೆ ಬೆಳೆಸಿದರು.

ಸಂತೋಷ್ ನಾರಾಯಣ್ ಸ್ವರ ಸಂಯೋಜನೆ ಮಾಡಿರುವ 'ರೆಟ್ರೊ' ಚಿತ್ರದ ಆರು ಹಾಡುಗಳು ಈಗ ಚರ್ಚೆ ಹುಟ್ಟುಹಾಕಿವೆ. ಮಾಧುರ್ಯಕ್ಕೆಂದು ಒಂದು ಹಾಡು ಇದ್ದರೆ, ರ‍್ಯಾಪ್ ಗುಂಗನ್ನು ಹೊತ್ತ, ಶಾಸ್ತ್ರೀಯ ಸಂಗೀತದ ಹದವರಿತ ಬೆರಕೆಯೂ ಇರುವ ಸಿದ್ ಶ್ರೀರಾಮ್ ಹಾಡಿರುವ ಗೀತೆಯೊಂದಕ್ಕೆ ಅನೇಕರು ಹೆಜ್ಜೆ ಹಾಕಲು ಆರಂಭಿಸಿದ್ದಾರೆ. ಕಳೆದ ಎರಡು ತಿಂಗಳಿನಿಂದ ಒಂದೊಂದೇ ಹಾಡುಗಳನ್ನು ಬಿಡುಗಡೆ ಮಾಡುತ್ತಾ, ಚಿತ್ರಕ್ಕೆ ಬೇಕಿರುವ ಅಗತ್ಯ ಪ್ರಚಾರವನ್ನು ತಂಡ ಕೊಟ್ಟುಕೊಳ್ಳುತ್ತಾ ಬಂದಿತು.

ಪೂಜಾ ಹೆಗಡೆ ನಾಯಕಿಯಾಗಿರುವ ಚಿತ್ರದಲ್ಲಿ ಕರುಣಾಕರನ್, ನಾಸರ್, ಪ್ರಕಾಶ್ ರಾಜ್, ಜೋಜು ಜಾರ್ಜ್ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ತಮ್ಮದೇ ಶೈಲಿಯ ಬಣ್ಣಗಳನ್ನು ಬಳಸಿ, ಮಬ್ಬು ಬೆಳಕಲ್ಲಿ ದೃಶ್ಯಗಳನ್ನು ತೋರಿಸುವ ಕಾರ್ತಿಕ್ ಈ ಚಿತ್ರದಲ್ಲಿಯೂ ಅಂತಹ ಒಂದು 'ಟೋನ್' ಇದೆ ಎಂಬ ಸೂಚನೆಯನ್ನು ಕೊಟ್ಟಿದ್ದಾರೆ.

ಕಳೆದ ವರ್ಷ ಸೂರ್ಯ ಅಭಿನಯದ 'ಕಂಗುವ' ಚಿತ್ರವು ನಿರೀಕ್ಷಿತ ಯಶಸ್ಸನ್ನು ಕಂಡಿರಲಿಲ್ಲ. 2020ರಲ್ಲಿ 'ಸೂರರೈ ಪೋಟ್ರು', ಅದರ ಮುಂದಿನ ವರ್ಷ 'ಜೈ ಭೀಮ್' ಚಿತ್ರಗಳ ಮೂಲಕ ಅವರು ಸಂಚಲನ ಮೂಡಿಸಿದ್ದರು. ■



■ ವಿಶಾಖ ಎನ್

# ಜೂನಿಯರ್ ಎನ್‌ಟಿಆರ್ ಸಪೂರ ಸ್ವರೂಪ

ಯಶ್‌ರಾಜ್ ಬ್ಯಾನರ್‌ನ ಪತ್ತೇದಾರಿ ಕಥನದ ಚಿತ್ರಗಳ ಯಾದಿಗೆ 'ವಾರ್2' ಹಿಂದಿ ಸಿನಿಮಾ ಸೇರ್ಪಡೆಯಾಗಲಿರುವುದು ಗೊತ್ತೇ ಇದೆ. ಆ ಚಿತ್ರದಲ್ಲಿ ಹೃತಿಕ್ ಜೊತೆಯಲ್ಲಿ ಜೂನಿಯರ್ ಎನ್‌ಟಿಆರ್ ಅಭಿನಯಿಸುತ್ತಿರುವುದು ವಿಶೇಷ. ಆ ಪಾತ್ರದಲ್ಲಿ ಹೃತಿಕ್ ಅವರ ದೇಹಾಕಾರಕ್ಕೆ ತಮ್ಮ ದೇಹವೂ ಹೊಂದಿಕೊಳ್ಳುವಂತೆ ಇರಬೇಕೆಂದು ಜೂನಿಯರ್ ಎನ್‌ಟಿಆರ್ ಪಥ್ಯಾಹಾರ ಸೇವಿಸುತ್ತಿದ್ದಾರೆ.

ಜೂನಿಯರ್ ಎನ್‌ಟಿಆರ್ ಅವರ 'ಬಾಡಿ ಡಬಲ್' (ಡ್ಯೂಪ್ ಎನ್ನುತ್ತೇವಲ್ಲ ಅದು) ಈಶ್ವರ್ ಹ್ಯಾರಿಸ್ ಎಂಬುವವರು ನಟ ಮಾಡುತ್ತಿರುವ ಡಯೆಟ್ ಕುರಿತು ತಿಳಿಸಿದ್ದಾರೆ. ಆದರೆ, ಅದು ಯಾವ ರೀತಿಯ ಪಥ್ಯಾಹಾರ ಎನ್ನುವ ಮಾಹಿತಿಯನ್ನು ಅವರು ನೀಡಲಿಲ್ಲ.

ಇತ್ತೀಚೆಗೆ ದುಬೈಗೆ ಜೂನಿಯರ್ ಎನ್‌ಟಿಆರ್ ಪ್ರವಾಸ ಹೋಗಿದ್ದರು. ಆಗ ಅವರ ಫೋಟೊಗಳನ್ನು ನೋಡಿದವರು, 'ಇದೇಕೆ ಇಷ್ಟು ಸಣ್ಣ ಆಗಿದ್ದಾರೆ' ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದರು. ಅವರ ಆರೋಗ್ಯದ ಕುರಿತು ಕೆಲವರು ಕಾಳಜಿಯ ಸಾಲುಗಳನ್ನೂ ಸಾಮಾಜಿಕ ಮಾಧ್ಯಮದಲ್ಲಿ ಬರೆದರು. ಅದು 'ವಾರ್2' ಸಿನಿಮಾಗೆ ನಡೆಸಿರುವ ಸಿದ್ಧತೆಯ ಫಲ ಎನ್ನುವುದನ್ನು ಹ್ಯಾರಿಸ್ ಮಾತು ಸ್ಪಷ್ಟಪಡಿಸಿದೆ. ಎನ್‌ಟಿಆರ್ ಎಷ್ಟು ಸಪೂರ ಆಗುತ್ತಾರೋ ಈಶ್ವರ್ ಕೂಡ ಅವರಷ್ಟೇ ಸಪೂರ ಆಗಬೇಕು ಎನ್ನುವುದು ಇನ್ನೊಂದು ಸುದ್ದಿ.

ಎಲ್ಲವೂ ಅಂದುಕೊಂಡಂತೆ ಆದರೆ ಆಗಸ್ಟ್ ತಿಂಗಳಲ್ಲಿ 'ವಾರ್2' ತೆರೆಕಾಣಲಿದೆ. ಪ್ರಶಾಂತ್ ನೀಲ್ ನಿರ್ದೇಶನದ ತೆಲುಗು ಚಿತ್ರಕ್ಕೂ ಜೂನಿಯರ್ ಎನ್‌ಟಿಆರ್ ಸಹಿ ಹಾಕಿದ್ದಾರೆ.

